ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ-584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ
Office No. +91 9141030953 ಪರೀಕ್ಷಾ ವಿಭಾಗ E-mail: registrarevrur@gmail.com

ಸಂಖ್ಯೆ: ರಾವಿರಾ/ಪರೀಕ್ಷಾ/2024-25/ 503 ದಿನಾಂಕ: 21.08.2024

**ಅಧಿಸೂಚನೆ**

ವಿಷಯ: ರಾಯಚೂರು ವಿಶ್ವವಿದ್ಯಾಲಯದ ಪ್ರಥಮ ವಾರ್ಷಿಕ ಘಟಿಕೋತ್ಸವವನ್ನು ಸೆಪ್ಟೆಂಬರ್/ ಅಕ್ಟೋಬರ್-2024 ರಲ್ಲಿ ಜರುಗಿಸುವ ಕುರಿತು.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 31.07.2024

*****

ರಾಯಚೂರು ವಿಶ್ವವಿದ್ಯಾಲಯದ **ಪ್ರಥಮ ವಾರ್ಷಿಕ ಘಟಿಕೋತ್ಸವವನ್ನು ಸೆಪ್ಟೆಂಬರ್/ಅಕ್ಟೋಬರ್ – 2024** ರಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ. 2022-23ನೇ ಶೈಕ್ಷಣಿಕ ವರ್ಷದಲ್ಲಿ ಪದವಿ ಪಡೆದಿರುವ ಅರ್ಹ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಂದ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು UUCMS ತಂತ್ರಾಂಶದ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಎಲ್ಲಾ ಬಿ.ಎಡ್, ಬಿ.ಪಿ.ಎಡ್, ಸ್ನಾತಕೋತ್ತರ ಮತ್ತು ಪಿಜಿ ಡಿಪ್ಲೊಮಾ ವಿದ್ಯಾರ್ಥಿಗಳು ಸದರಿ ಘಟಿಕೋತ್ಸವದ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ಸಂದರ್ಭದಲ್ಲಿ ಉಪಸ್ಥಿತಿ (in person) ಹಾಗೂ ಅನುಪಸ್ಥಿತಿಯೊಂದಿಗೆ (in absentia) ಪಡೆಯಬಹುದು. ಘಟಿಕೋತ್ಸವದ ಪದವಿ ಪ್ರಮಾಣ ಪತ್ರ ಪಡೆಯಲು UUCMS ತಂತ್ರಾಂಶದ ಮೂಲಕವೇ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

**ಘಟಿಕೋತ್ಸವದ ವೇಳಾಪಟ್ಟಿಯನ್ನು ಈ ಕೆಳಗಿನಂತೆ ಅಧಿಸೂಚಿಸಲಾಗಿದೆ**

| ಕ್ರ ಸಂ. | ವಿವರಗಳು | ದಿನಾಂಕ |
|---|---|---|
| 1 | UUCMS ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಾರಂಭ ದಿನಾಂಕ | 22.08.2024 |
| 2 | UUCMS ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ | 15.09.2024 |
| 3 | ಪ್ರತಿ ದಿನಕ್ಕೆ ರೂ. 50.00 ದಂಡ ಶುಲ್ಕದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ | 16.09.2024 ರಿಂದ 25.09.2024 |
| 4 | ಪ್ರತಿ ದಿನಕ್ಕೆ ರೂ. 500.00 ದಂಡ ಶುಲ್ಕದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ | 30.09.2024 ರಿಂದ ಘಟಿಕೋತ್ಸವ ಜರುಗುವ 10 ದಿವಸಗಳ ಮುಂಚೆಯ ವರೆಗೆ |

**ಘಟಿಕೋತ್ಸವ ಪ್ರಮಾಣ ಪತ್ರದ ಶುಲ್ಕದ ವಿವರ**

| ವಿವರಣೆ | ಪದವಿ ಪ್ರಮಾಣ ಪತ್ರ ಉಪಸ್ಥಿತಿಯಲ್ಲಿ (in person) ಪಡೆಯಲು | ಪದವಿ ಪ್ರಮಾಣ ಪತ್ರ ಅನುಉಪಸ್ಥಿತಿಯಲ್ಲಿ (in absentia) ಪಡೆಯಲು |
|---|---|---|
| ಸ್ನಾತಕೋತ್ತರ, ಬಿ.ಎಡ್, ಬಿ.ಪಿ.ಎಡ್, ಪಿಜಿ ಡಿಪ್ಲೊಮಾ ಘಟಿಕೋತ್ಸವ ಪ್ರಮಾಣ ಪತ್ರಗಳ ಶುಲ್ಕ | ರೂ.2000/- | ರೂ.2800/- |

**ಸೂಚನೆ:** ಘಟಿಕೋತ್ಸವ ಪದವಿ ಪ್ರಮಾಣ ಪತ್ರವನ್ನು ಪಡೆಯಲು ಸಲ್ಲಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಬೇರಾವುದೇ ಉದ್ದೇಶಗಳಿಗಾಗಿ ಹೊಂದಾಣಿಕೆ ಮಾಡುವುದಿಲ್ಲ ಮತ್ತು ಹಿಂತಿರಿಗಿಸುವುದಿಲ್ಲ.

ಘಟಿಕೋತ್ಸವ ಜರುಗುವ ನಿಗದಿತ ಸ್ಥಳ, ದಿನಾಂಕ ಮತ್ತು ಸಮಯವನ್ನು ರಾಯಚೂರು ವಿಶ್ವವಿದ್ಯಾಲಯದ ಜಾಲತಾಣದಲ್ಲಿ **https://raichuruniversity.ac.in**, ದಿನಪತ್ರಿಕೆಯಲ್ಲಿ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಮುಂಬರುವ ದಿನಗಳಲ್ಲಿ ಪ್ರಕಟಣೆಯ ಮೂಲಕ ತಿಳಿಸಲಾಗುವುದು.

**2022-23ನೇ ಸಾಲಿನಲ್ಲಿ ನಿಯಮಿತವಾಗಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಸೂಚನೆಗಳು:**

- ವಿದ್ಯಾರ್ಥಿಗಳು **https://uucms.karnataka.gov.in/Login/Index** ವೆಬ್‌ಸೈಟ್‌ಗೆ ಭೇಟಿ ನೀಡಿ, ತಮ್ಮ ಲಾಗಿನ್‌ನಲ್ಲಿ **"Exam"** ಮೇಲೆ ಕ್ಲಿಕ್ ಮಾಡಿ ಅದರಲ್ಲಿರುವ **"Convocation"** ಮೇಲೆ ಕ್ಲಿಕ್ ಮಾಡಿ ಅರ್ಜಿಗಳನ್ನು ಭರ್ತಿ ಸಲ್ಲಿಸಬಹುದಾಗಿದೆ.
- ಘಟಿಕೋತ್ಸವದ ಶುಲ್ಕವನ್ನು UUCMSನಲ್ಲಿಯೇ ಭರಿಸತಕ್ಕದ್ದು.
- ಶುಲ್ಕ ಪಾವತಿಸಿದ ನಂತರ ವಿದ್ಯಾರ್ಥಿಗಳು ಪಾವತಿಸಿದ ಅರ್ಜಿಯ ಪ್ರತಿಯನ್ನು ಮತ್ತು ದೃಢೀಕರಿಸಿದ ಅಂಕಪಟ್ಟಿಗಳನ್ನು ಕಾಲೇಜಿನ ಪ್ರಾಂಶುಪಾಲರುಗಳಿಗೆ ಸಲ್ಲಿಸತಕ್ಕದ್ದು ಹಾಗೂ ಅರ್ಜಿಗಳನ್ನು ಪ್ರಾಂಶುಪಾಲರು ದೃಡೀಕರಿಸಿ ಕುಲಸಚಿವರು(ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು ಇವರ ಕಛೇರಿಯ ಆವಕ ವಿಭಾಗಕ್ಕೆ((Inward Section) ಸಲ್ಲಿಸಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

(ಪ್ರೊ. ಯರಿಸ್ವಾಮಿ ಎಂ.)
ಕುಲಸಚಿವರು (ಮೌಲ್ಯಮಾಪನ)
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಪ್ರತಿಗಳು :

1. ಮಾನ್ಯ ಕಾರ್ಯದರ್ಶಿಗಳು, ವಿಶ್ವವಿದ್ಯಾಲಯದ ಅನುದಾನ ಆಯೋಗ, ಬಹದ್ದೂರ ಶಾಹಾ ಜಾಫರ್ ಮಾರ್ಗ, ನವದೆಹಲಿ-110002
2. ಗೌರವಾನ್ವಿತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-580001
3. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, 5ನೇ ಮಹಡಿ ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001
4. ಮಾನ್ಯ ಕುಲಸಚಿವರು, ಭಾರತದ ಎಲ್ಲಾ ವಿಶ್ವವಿದ್ಯಾಲಯಗಳು ಹಾಗೂ ಇಂಡಿಯನ್ ಇನಸ್ಟಿಟ್ಯೂಟ್ ಆಫ್ ಸೈನ್ಸ್ ಹಾಗೂ ಡೀಮಡ್ ವಿಶ್ವವಿದ್ಯಾಲಯಗಳು.
5. ಮಾನ್ಯ ಕಾರ್ಯದರ್ಶಿಗಳು, ಭಾರತೀಯ ವಿಶ್ವವಿದ್ಯಾಲಯಗಳ ಅಸೋಸಿಯನ್, ಎ.ಐ.ಯು. ಹೌಸ್, 16ನೇ ಕೋಟ್ಲಾ ರಸ್ತೆ, ನವದೆಹಲಿ.
6. ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
7. ಎಲ್ಲಾ ನಿಕಾಯದ ಡೀನರುಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
8. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
9. ಗ್ರಂಥಪಾಲಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
10. ನಿರ್ದೇಶಕರು ಐ.ಕ್ಯೂ.ಎ.ಸಿ. ಘಟಕ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
11. ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
12. ಸಂಯೋಜಕರು, ಎನ್.ಎಸ್.ಎಸ್. ಘಟಕ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
13. ನಿರ್ದೇಶಕರು, ಪ್ರಸಾರಾಂಗ ಕೇಂದ್ರ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
14. ಜಾಲತಾಣ ವಿಭಾಗ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು- ಈ ಅಧಿಸೂಚನೆಯನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲು ಸೂಚಿಸಿದೆ.
15. ಸ್ಥಳೀಯ ಅಭಿಯಂತರರು/ಸಹಾಯಕ ಅಭಿಯಂತರರು(ವಿದ್ಯುತ್), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

16. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಚೇರಿ, 1ನೇ ಮಹಡಿ ಪ್ಲಾಟ್ ನಂ. 126/ಎ44, ದರ್ಶನಾಪುರ, ಜಿ.ಡಿ.ಎ, ಲೇಔಟ್, ಸಂತ್ರಾಸವಾಡಿ, ಕಲಬುರಗಿ.
17. ನೋಡಲ್ ಅಧಿಕಾರಿಗಳು, ಮಾಹಿತಿ ಹಕ್ಕು ಘಟಕ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
18. ವಿಶ್ವವಿದ್ಯಾಲಯದ ಸಂಘ ಸಂಸ್ಥೆಗಳು ಹಾಗೂ ಒಕ್ಕೂಟದ ಅದ್ಯಕ್ಷರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
19. ಪ್ರಾಂಶುಪಾಲರುಗಳು, ರಾಯಚೂರು ವಿಶ್ವವಿದ್ಯಾಲಯದ ಅಧೀನಕೊಳ್ಳಪಟ್ಟ ಎಲ್ಲಾ ಮಹಾವಿದ್ಯಾಲಯಗಳು
20. ಕುಲಪತಿಗಳ ಆಪ್ತಕಾರ್ಯದರ್ಶಿ/ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
21. ಸೂಚನಾ ಫಲಕಕ್ಕೆ.